ಹೆಚ್.ಎಂ. ಅನಂತಪದ್ಮನಾಭ, ಮೈಸೂರು

ಹೆಂಡ್ತಿ ಆಲ್ವೇಸ್ ಕರೆಕ್ಟ್; ಗಂಡ ಆಲ್ವೇಸ್ ರಾಂಗ್. ಗಂಡನು 'ನೀನು ಹೇಳಿದ್ದು ಸರಿ ಕಣೆ' ಅಂದಾಗ?



ಅಲ್ಲಿಗೆ ಸಂಪೂರ್ಣ ಶರಣಾಗತಿ ಆಯಿತಲ್ಲ! ಅದೊಂದು ತಪ್ಪಿಗೆ ಅಪಾರ ದಂಡ ತೆರಬೇಕಾಗುತ್ತದೆ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಯಶಸ್ವಿ ಪುರುಷನ ಹಿಂದೆ ಸ್ತ್ರೀ ಇರುತ್ತಾಳೆ. ಅಕ್ಕಪಕ್ಕಗಳಲ್ಲಿ ಯಾರಿರುತ್ತಾರೆ?

ಆ ಸ್ತ್ರೀ ಹಿಂದೆಯೇ ಉಳಿಯುವಂತೆ ನೋಡಿಕೊಳ್ಳುವ ಪಡೆ.

ಅನಸೂಯಾ ಟಿ, ಕೇದಿಗೆಮನೆ

ಭಗವಂತ ಮನುಷ್ಯನನ್ನು ಏಕೆ ಸೃಷ್ಟಿಸಿದ್ದಾನೆ?

ದೇವನೂ ಕೆಲವೊಮ್ಮೆ ತಪ್ಪು ಮಾಡುತ್ತಾನೆ ಎಂದು ತೋರಿಸಲು.

ವಿ. ಹೇಮಂತಕುಮಾರ್, ಬೆಂಗಳೂರು

ಬಣ್ಣಬಣ್ಣದ ಸೀರೆ ಓಕೆ. ಸ್ಲೀವ್‌ಲೆಸ್ ಬ್ಲೌಸ್ ಏಕೆ?



ನಿಮ್ಮ ತೋಳದ ಕಣ್ಣು ತೋಳ ಮಟ್ಟಕ್ಕೇ ನಿಲ್ಲಲೆಂದು.

ಬಿದರಹಳ್ಳಿ ಐಶ್ವರ್ಯ, ಹಿರೇಹಡಗಲಿ

ಸ್ನೇಹ ಹಾಗೂ ಸಹವಾಸ; ಇವೆರಡರ ನಡುವೆ ಇರುವ ವ್ಯತ್ಯಾಸವೇನು?

ಸ್ನೇಹದ್ದು ಆಪ್ತ ವಾತಾವರಣ. ಸ'ಹವಾ'ಸದಲ್ಲಿ ಹವಾ ಬದಲಾಗುತ್ತದೆ.

ಬಿ. ಚಂದ್ರೇಗೌಡ, ಬೆಂಗಳೂರು

ಶರೀರ ಭಾರವಾಗುವುದಕ್ಕೂ, ಮನಸ್ಸು ಭಾರವಾಗುವುದಕ್ಕೂ ವ್ಯತ್ಯಾಸ?

ಮನಸ್ಸಿನ ಭಾರವನ್ನು ಹಂಚಿಕೊಂಡು ತಗ್ಗಿಸಿಕೊಳ್ಳಬಹುದು.

ಪಿ.ಜೆ. ರಾಘವೇಂದ್ರ, ಮೈಸೂರು

ಡಿಸಿಎಂ ಎಂದಾಗ ಡಿಶುಂ ಡಿಶುಂ ಎಂದಹಾಗೆ ಕೇಳಿಸುವುದಲ್ಲ?

ಸಿಎಂ ರಾಂಗ್ ಆದರೆ ಢೀ ಕೊಡುವವರೇ ಡಿಸಿಎಂ ಎಂಬ ಭಾವ ನಿಮ್ಮಲ್ಲಿದೆಯೆಂದಾಯ್ತು.

ಸುರೇಶ್ ಬಿ.ವಿ. ಬೆಂಗಳೂರು

ಗಂಡು ದೇವರು ಜಾಸ್ತಿ ಇದ್ದಾರೋ, ಹೆಣ್ಣು ದೇವರು ಜಾಸ್ತಿ ಇದ್ದಾರೋ?

ಎಲ್ಲೆಡೆ 'ಮೈ ಗಾಡ್!' ಘೋಷಣೆಯೇ ಇದ್ದು, 'ಮೈ ಗಾಡೆಸ್' ಇಲ್ಲವಾದ್ದರಿಂದ, ಗಂಡೇ.

ಪಿ. ಜಯವಂತ ಪೈ, ಕುಂದಾಪುರ

ಕಾವಿ ತೊಟ್ಟವರಿಗೆ ಪ್ರಚಾರದ ಗೀಳು ಜೋರಾಗಿದೆಯಲ್ಲ...?

ಕೆಲವೆಡೆ ಕಾವಿಯೆಂದರೆ ಕಾಕಾಸಿನ; ವಿವಿಚಾರ. ಅಬ್ಬರವಿಲ್ಲದಿದ್ದರೆ ಹಣಕ್ಕೆ ಗ್ರಹಣ.

ವಸುಂಧರಾ ಸತ್ಯ, ದೊಡ್ಡಬಳ್ಳಾಪುರ

ಈ ಕಾಲದಲ್ಲಿಯೂ ಭೂತ, ಪ್ರೇತ, ವಾಮಾಚಾರಗಳನ್ನು ನಂಬುವವರು ಇದ್ದಾರೆಯೆ?

ವಿಧಾನಸೌಧ, ಪಾರ್ಲಿಮೆಂಟಿನ ಸಭೆಗಳನ್ನು ಕಂಡೂ ಹೀಗೆ ಪ್ರಶ್ನಿಸುವುದೇ, ಅಕಟಕಟಾ!

ಎಲ್.ಐ.ಸಿ. ವಿಜೇಂದ್ರ, ಮೈಸೂರು

ಮದುವೆ ಮನೆಯಲ್ಲಿ ಮದುವೆಯ ಹೆಣ್ಣಿಗಿಂತ ಅವರಮ್ಮನೇ ಹೆಚ್ಚು ಅಲಂಕಾರ ಮಾಡಿಕೊಳ್ಳುತ್ತಾರಲ್ಲ?

ಮಾಡೆಲ್ ಓಲ್ಡ್ ಅದಾಗ ಟಿಂಕರಿಂಗ್ ಮಾಡಿದರೆ ಹೀಗೆ ಕಾಣುವುದೆಂದು ತೋರಿಸಲು.

ಎಲ್.ಕೆ. ರಾಜು, ತುಮಕೂರು

ಸೂರ್ಯೋದಯದ ಹೆಸರಿನ ಅವಳು ವಾಟ್ಸ್‌ಆ್ಯಪ್‌ನಲ್ಲಿ ಆಗಾಗ ಬ್ಲಾಕ್, ಅನ್‌ಬ್ಲಾಕ್ ಮಾಡ್ತಾಳೆ. ಪ್ರೀತಿ ಇರಬಹುದಾ?

ಎಲೆ ಇಲಿಯೆ, ಅದು ಬೆಕ್ಕು ಆಡುತ್ತಿರುವ ಚೆಲ್ಲಾಟವೆಂದು ಇನ್ನಾದರೂ ತಿಳಿ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಹೆಂಡತಿಗೆ ಅಂಜುವವನನ್ನು ಉತ್ತರಕುಮಾರ ಎಂದು ಕರೆಯಬಹುದೆ?

ಊಹೂಂ. ಅವನು ನಿರುತ್ತರಕುಮಾರ.

## ಬಹುಮಾನಿತ ಪ್ರಶ್ನೆ

ದಿನೇಶ್ ಗುಡ್ಡದೂರು, ಆಲ್ದೂರು

ರಾಜಕೀಯ ಪಕ್ಷಗಳಲ್ಲಿ ಹೈಕಮಾಂಡ್ ಇರುವಂತೆ ಲೋ ಕಮಾಂಡ್ ಏಕಿಲ್ಲ?

ಇದೆ. 'ಲಾಕ್ ಲೋ', 'ಕರೋಡ್ ಲೋ' ಎನ್ನುತ್ತಾ ಭಿನ್ನಮತೀಯರಿಗೆ ಕೊಡುವುದು ಲೋ ಕಮಾಂಡೇ.

ಶಿರಾಲಿ ದೀಪಕ್ ಶೇಟ್, ಬೆಂಗಳೂರು

ಹೆಂಡತಿ/ಪ್ರೇಯಸಿಯನ್ನು ಚಿನ್ನ, ಬಂಗಾರಕ್ಕೆ ಹೋಲಿಸುವುದು ಯಾಕೆ?

ರಕ್ಷಿಸಿಕೊಳ್ಳದಿದ್ದರೆ ಪರರ ಪಾಲಾಗುವ ಭಯ ಇರುವುದರಿಂದ.

ಗಾಯಿತ್ರಿ ಸೋಮೇಶ್ವರ್, ರಾಣೆಬೆನ್ನೂರು

ಭರವಸೆಗಳಲ್ಲೇ ಹೊಟ್ಟೆ ತುಂಬಿಸುವವರಿಗೆ ನೀವು ಏನು ಹೇಳ್ತೀರಾ ಸರ್?

ಹಾಗೆ ಆಶಿಸುವವರು **EPND**ಗಳು – ಎವರ್ ಪ್ರೆಗ್ನೆಂಟ್, ನೆವರ್ ಡೆಲಿವರಿ.

ಮಹಾವೀರ ಕಾಸರ, ಶಿವಮೊಗ್ಗ

ಸೆಲ್ಫಿಯಿಂದಾಗುವ ಪ್ರಯೋಜನ ಏನು?



ಕ್ಲೋಸಪ್ ಫೋಟೊ ಆದ್ದರಿಂದ ಹಲ್ಲಿನ ಸ್ವಚ್ಛತೆಯ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತದೆ.

ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ

ತೋರಿಕೆ, ಪ್ರದರ್ಶನ, ವಿಷಯಲಂಪಟತೆ, ಧರ್ಮವಿಮುಖತೆ ಇರುವವರೇ ಉನ್ನತ ಹುದ್ದೆಗಳಲ್ಲಿರುವರಲ್ಲ?

ದ್ವಾಪರದ ಪ್ರಸಾದ – ಕೌರವರ ಹಾದಿಯೇ ಇಲ್ಲೂ ಅನುಷ್ಠಾನಗೊಂಡಿದೆ.

ಎಂ.ಸಿ. ಪಟೇಲ್, ಬೆಂಗಳೂರು

ಇಲ್ಲೊಬ್ಬ ವೃದ್ಧರು 'ನರನನ್ನು ಅಲ್ಲಾಡಿಸುವವಳೇ ನಾರಿ' ಎನ್ನುತ್ತಿದ್ದಾರೆ. ನಿಜವೆ?

ನಿಜ. ದೀರ್ಘನಿದ್ರೆಯಲ್ಲಿರುವವರನ್ನು ಎಬ್ಬಿಸಲು ಅಲ್ಲಾಡಿಸಲೇಬೇಕಲ್ಲ!

**ರಾಮ್**